<u>ದಿನಾಂಕ : 14.12.2023 ರಂದು ಪ್ರಮಾಣ ವಚನ ಬೋಧಿಸಲಾಗಿದೆ</u>

<u>ಪಾಟೀ ಸವಾಲು : ಆರೋಪಿ ಪರವಾಗಿ ಶ್ರೀ. ಕೆ ಎಂ ಬಿ ವಕೀಲರಿಂದ :</u>

18. ಘಟನೆಯ ದಿನ ಗಸ್ತಿಗೆ ಹೋಗುವ ಸಲುವಾಗಿ ನಾವು ಠಾಣೆಯಿಂದ ಹೊರಟಾಗ ಸಮಯ ಮ.2.15 ರಿಂದ 2.30 ಅಂದಾಜು ಆಗಿತ್ತು. ಆ ದಿನ ನಾವು ಯಾವುದೇ ರೂಟ್ ಮ್ಯಾಪ್ ಹಾಕಿಕೊಂಡಿರಲಿಲ್ಲ. ಘಟನಾಸ್ಥಳದಿಂದ ನಮ್ಮ ಠಾಣೆ ಸುಮಾರು 50 ಕಿಮಿ ದೂರದಲ್ಲಿದೆ ಎಂದರೆ ಇರಬಹುದು. ಆ ದಿನ ನಾವು ಗಸ್ತು ಮಾಡಿದ ಸ್ಥಳಗಳ ಹೆಸರುಗಳು ನನಗೆ ನಿಖರವಾಗಿ ನೆನಪಿಲ್ಲ. ಆದರೆ ಆ ದಿನ ನಾವು ದೊಡ್ಡಬ್ಯಾಡರಹಳ್ಳಿ ಮೂಲಕ ಪಾಂಡವಪುರಕ್ಕೆ ಹೋಗಿದ್ದೆವು. ಸೀಲು ಮಾಡಲು ಬೇಕಾದ ಅರಗು, ತೂಕದ ಯಂತ್ರ, ಸೀಲು ಮುಂತಾದ ವಸ್ತುಗಳು ನಮ್ಮ ಇಲಾಖಾ ವಾಹನದಲ್ಲಿ ಯಾವಾಗಲೂ ಇರುತ್ತವೆ. ಗಸ್ತಿಗೆ ಹೋಗುವುದು ನನ್ನ ಸಹಜ ಕರ್ತವ್ಯ ಆಗಿರುವುದರಿಂದ ನಾನು ಗಸ್ತಿಗೆ ಹೋಗುವಾಗ ನನ್ನ ಮೇಲಾಧಿಕಾರಿಗೆ ತಿಳಿಸಿ ಹೋಗುವ ಅಗತ್ಯ ಇರುವುದಿಲ್ಲ.

19. ಘಟನಾಸ್ಥಳಕ್ಕೆ ಹೋಗುವ ಬಗ್ಗೆ ನಾನು ಸ್ಥಳೀಯ ಪೊಲೀಸರಿಗೆ ಮಾಹಿತಿ ನೀಡಿರಲಿಲ್ಲ. ಏಕೆಂದರೆ ಅದರ ಅವಶ್ಯಕತೆ ನಮಗೆ ಇರುವುದಿಲ್ಲ. ಘಟನಾಸ್ಥಳಕ್ಕೆ ಹೋಗುವ ಮೊದಲು ಹಲವಾರು ಗ್ರಾಮಗಳು ಇದ್ದು, ಅದರಲ್ಲಿ ಆಸ್ಪತ್ರೆ, ಅಂಗನವಾಡಿ ಕೇಂದ್ರಗಳು ಇವೆ ಎಂದರೆ ಇರಬಹುದು. ಗ್ರಾಮಸ್ಥರು ಪಂಚರಾಗಿ ಸಹಕರಿಸಲು ನಿರಾಕರಿಸಿದ್ದರಿಂದ ಗ್ರಾಮಸ್ಥರಿಗೆ ಲಿಖಿತ ನೋಟೀಸು ಕೊಡಲು ಆಗಲಿಲ್ಲ. ಹರದನಹಳ್ಳಿಯಲ್ಲಿ ಆಸ್ಪತ್ರೆ, ಶಾಲೆ ಹಾಗೂ ಅಂಗನವಾಡಿ ಕೇಂದ್ರ ಇದೆ ಎಂದರೆ ಸದರಿ ವಿಚಾರದ ಬಗ್ಗೆ ನಮಗೆ ಮಾಹಿತಿ ಸಿಗಲಿಲ್ಲ ಎಂದು ನುಡಿದಿದ್ದಾರೆ. ಸದರಿ ಗ್ರಾಮದಲ್ಲಿ ಆಶಾ ಕಾರ್ಯಕರ್ತೆಯರು ಇರುತ್ತಾರೆ ಎಂದರೆ ನನಗೆ ಆ ಬಗ್ಗೆ ಮಾಹಿತಿ ಇಲ್ಲ.

20. ದಾಳಿಗೆ ಹೋದ ಸಮಯದಲ್ಲಿ ನಮ್ಮ ವಾಹನ ಮುಂದೆ ಹೋಗುತ್ತಿತ್ತು. ನಮ್ಮ ಜೊತೆಗೆ ಬಂದ ಮತ್ತೊಂದು ವಾಹನದ ಸಂಖ್ಯೆ ನನಗೆ ನೆನಪಿಲ್ಲ. ಮತ್ತೊಂದು ವಾಹನ ಟಾಟಾ ಸುಮೋ ವಾಹನವಾಗಿದ್ದು, ನಾಗಮಂಗಲ ವಲಯ ನಿರೀಕ್ಷಕರಾದ ಗೀತಾ, ಉಪ ನಿರೀಕ್ಷಕರಾದ ಪೂರ್ಣಿಮ, ರವಿಕುಮಾರ್, ಅಬಕಾರಿ ಪೇದೆ ದೇವರಾಜು ಮತ್ತು ಪ್ರಮೋದ್ ಬಂದಿದ್ದರು.

21. ತೋಟದ ಒಳಗೆ ಮೊದಲು ಹೋಗಿದ್ದು ನಾವುಗಳು ಆಗಿರುತ್ತೇವೆ. ಸದರಿ ತೋಟದ ಅಕ್ಕಪಕ್ಕ ಸ್ಥಳಿಕರು ಸಾಮಾನ್ಯವಾಗಿ ವ್ಯವಸಾಯ ಮಡುತ್ತಿರುತ್ತಾರೆ ಎಂದರೆ ಸಾಕ್ಷಿ ಆ ದಿನ ಆ ಹೊತ್ತಿಗೆ ಸಂಜೆಯಾಗಿದ್ದರಿಂದ ಸದರಿ ತೋಟದ ಅಕ್ಕಪಕ್ಕ ಯಾರೂ ಇರಲಿಲ್ಲ ಎಂದು ನುಡಿದಿದ್ದಾರೆ. ಘಟನ್ನಾಸ್ಥಳ

ಶಿಲ್ಪಾಪುರ ಹಾಗೂ ಹರದನಹಳ್ಳಿಯ ನಡುವೆ ಇರುವ ತೋಟ ಎಂದರೆ ಸರಿ. ಸದರಿ ತೋಟದ ಬಳಿ ಇರುವ ಮುಖ್ಯ ರಸ್ತೆಯಲ್ಲಿ ಮೇಲ್ಕಂಡ 2 ಗ್ರಾಮಗಳ ಜನರು ಓಡಾಡುತ್ತಿರುತ್ತಾರೆ ಎಂದರೆ ಇರಬಹುದು. ನಾವು ಘಟನಾಸ್ಥಳದ ಬಳಿ ಹೋದಾಗ ಅಲ್ಲಿರುವ ರಸ್ತೆಯಲ್ಲಿ ಸಾರ್ವಜನಿಕರು ಓಡಾಡುತ್ತಿರುವುದು ಕಂಡು ಬರಲಿಲ್ಲ. ಸದರಿ ತೋಟದಲ್ಲಿ ಮಾವು ಮತ್ತು ತೆಂಗಿನ ಗಿಡಗಳನ್ನು ಬೆಳೆದಿದ್ದು ಕಂಡು ಬಂದಿತು.

22. ಆ ದಿನ ಸದರಿ ತೋಟವನ್ನು ಹಾಗೂ ಅಲ್ಲಿದ್ದ ಮನೆಯಲ್ಲಿ ನಾವು ಹುಡುಕಾಡಿದೆವು. ಆ ಸಮಯದಲ್ಲಿ ಒಣಗಿರುವ ಗಾಂಜಾ ಸೊಪ್ಪು ನಮಗೆ ಕಂಡು ಬರಲಿಲ್ಲ. ಸದರಿ ತೋಟದಲ್ಲಿ ಬೆಳೆದಿದ್ದ ಗಾಂಜಾ ಗಿಡಗಳನ್ನು ಕಿತ್ತವರು ನಮ್ಮ ಸಿಬ್ಬಂದಿಗಳಾದ ಮನೋಹರ್ ಮತ್ತು ನಾಗೇಶ ಆಗಿರುತ್ತಾರೆ. ಸದರಿ ಗಿಡದ ಬುಡದ ಮಣ್ಣನ್ನು ಪ್ರತ್ಯೇಕವಾಗಿ ನಾವು ಸಂಗ್ರಹಿಸಿರುವುದಿಲ್ಲ, ಬೇರಿಗೆ ಅಂಟಿದ್ದ ಮಣ್ಣನ್ನು ಮಾತ್ರ ತೆಗೆದುಕೊಳ್ಳಲಾಯಿತು.

23. ನಿಪಿ.4 ಮಹಜರನ್ನು ನಮ್ಮ ಸಿಬ್ಬಂದಿ ಮನೋಹರ್ ಬರೆದಿರುತ್ತಾರೆ. ನನ್ನ ಸ್ವ ವರದಿಯನ್ನು ನಮ್ಮ ಕಚೇರಿಯಲ್ಲಿ ತಯಾರು ಮಾಡಲಾಯಿತು. ಸ್ಥಳದಲ್ಲಿ ಮಹಜರನ್ನು ಹೊರತುಪಡಿಸಿ ಬೇರೆ ಯಾವುದೇ ವರದಿಯನ್ನು ತಯಾರಿಸಿಲ್ಲ.

24. ನನ್ನ ತನಿಖೆ ಕಾಲದಲ್ಲಿ ಆರೋಪಿ ಸದರಿ ತೋಟದಲ್ಲಿ ಕೆಲಸ ಮಾಡುತ್ತಿದ್ದ ಬಗ್ಗೆ ದಾಖಲೆಯನ್ನು ನಾನು ಸಂಗ್ರಹಿಸಿರುವುದಿಲ್ಲ. ಆರೋಪಿ ಹೊರ ರಾಜ್ಯದವನು ಎಂದರೆ ಸರಿ. ಸಾಕ್ಷಿ ಪುನಃ ನುಡಿಯವುದೇನೆಂದರೆ ಆರೋಪಿ ತಾನು ಬೆಂಗಳೂರು ವಾಸಿಯಾಗಿದ್ದು, ಹಾಲಿ ಶಿಲ್ಪಾಪುರ ಗ್ರಾಮದಲ್ಲಿ ವಾಸವಿರುತ್ತೇನೆ ಎಂದು ಹೇಳಿರುತ್ತಾನೆ. ನನ್ನ ತನಿಖೆಯ ಕಾಲದಲ್ಲಿ ಆರೋಪಿ ಶಿಲ್ಪಾಪುರದಲ್ಲಿ ವಾಸವಿದ್ದ ಬಗ್ಗೆ ಯಾವುದೇ ಸರ್ಕಾರಿ ದಾಖಲೆಯನ್ನು ನಾನು ಸಂಗ್ರಹಿಸಿರುವುದಿಲ್ಲ.

25. ಆರೋಪಿ ಸದರಿ ತೋಟದಲ್ಲಿ ಕೆಲಸ ಮಾಡುತ್ತಿರಲಿಲ್ಲವಾದರೂ ಸಹ ಆರೋಪಿ ಹೊರರಾಜ್ಯದವನಾಗಿರುವುದರಿಂದ ನಾನು ಆತನನ್ನು ಈ ಪ್ರಕರಣದಲ್ಲಿ ಸಿಲುಕಿಸಿರುತ್ತೇನೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ವಶಪಡಿಸಿಕೊಂಡ ಗಾಂಜಾ ಗಿಡಗಳಿಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

26. ನಾನು ಮೇಲ್ಕಂಡ ತೋಟಕ್ಕೆ ಬೇಟಿ ನೀಡಿಲ್ಲವಾದರೂ ಸಹ ಆರೋಪಿಯ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ತೋಟದಲ್ಲಿ ಯಾವುದೇ ಗಾಂಜಾ ಗಿಡಗಳು

ಬೆಳೆದಿರಲಿಲ್ಲ ಎಂದರೆ ಸರಿಯಲ್ಲ. ನಾನು ಸದರಿ ತೋಟದಲ್ಲಿ ಯಾವುದೇ ಮಹಜರು ಮಾಡಿಲ್ಲ ಹಾಗೂ ಸದರಿ ಮಹಜರನ್ನು ನಮ್ಮ ಕಚೇರಿಯಲ್ಲಿ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ :</u>

ಏನೂ ಇಲ್ಲ

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಬಿ.ಜಿ.ರಮಾ.)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.